

SERVICE ABOVE SELF

2025-26

Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –37 ದಿನಾಂಕ : 25–03–2026


**ದಿನಾಂಕ: 25.03.2026 ರಂದು ಕೌಟುಂಬಿಕ ಸ್ನೇಹ ಮಿಲನ ಕಾರ್ಯಕ್ರಮ. ಅಂದು ವಿಶೇಷ ಕಾರ್ಯಕ್ರಮ ಖ್ಯಾತ ರಾಷ್ಟ್ರಕವಿ ಶ್ರೀ ಜಿ.ಎಸ್. ಶಿವರುದ್ರಪ್ಪ ರಚಿಸಿದ ಕಾವ್ಯ ಮತ್ತು ಕವಿತೆಗಳನ್ನು ಒಳಗೊಂಡಂತೆ ರಚಿಸಿದ ನಾಟಕ 'ವಿಫುಲ ರೂಪಧಾರಿಣಿ' ಯನ್ನು ಶಿವಮೊಗ್ಗ ನಗರದ ಹೊಂಗಿರಣ ಸಂಸ್ಥೆಯ ಪ್ರಮುಖರಾದ ಶ್ರೀ ಸಾಸ್ವೆಹಳ್ಳಿ ಸತೀಶ್ ರಚಿಸಿ ನಿರ್ದೇಶಿಸಿದ್ದು ಅದನ್ನು ನಾಟಕರಂಗಕ್ಕೆ ಅಳವಡಿಸಿದ್ದು ಅವರ ತಂಡದಿಂದ ನಮ್ಮ ರೋಟರಿಯ ಕೌಟುಂಬಿಕ ಸ್ನೇಹಮಿಲನ ಕಾರ್ಯಕ್ರಮದಲ್ಲಿ ಪ್ರಸ್ತುತ ಪಡಿಸಲಾಯಿತು. ರೋಟರಿಯ ಕಲಾಪಕ್ಕಾಗಿ ವೇದಿಕೆಯಲ್ಲಿ ಅಧ್ಯಕ್ಷರಾದ ರೊ. ಆರ್. ಆನಂದ್, ಮುಖ್ಯ ಅತಿಥಿಗಳಾಗಿ ಡಾ.ಸಾಸ್ವೆಹಳ್ಳಿ ಸತೀಶ್ ಹಾಗೂ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವೇದಿಕೆಯಲ್ಲಿದ್ದರು. ಸಾರ್ಜೆಂಟ್ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿ ಸಭೆ ಆರಂಭಿಸಲು ಅನುವು ಮಾಡಿದರು.**










ಕು.ದಿಶಾರವರಿಂದ "ದೇವಿ ಪೊರೆ ಶಾರದೆ ವರದೆ" ಎಂಬ ಗೀತೆಯ ಸುಶ್ರಾವ್ಯ ಗಾಯನದೊಂದಿಗೆ ಸಭೆ ಆರಂಭವಾಯಿತು. ಮಾಜಿ ಅಧ್ಯಕ್ಷರಾದ ರೊ.ವೀರಣ್ಣ ಎ. ಹುಗ್ಗಿಯವರು ಸರ್ವರನ್ನು ಸ್ವಾಗತಿಸಿದರು. ನಾಟಕ ರಚನೆಕಾರ ಡಾ. ಸಾಸ್ವೆಹಳ್ಳಿ ಸತೀಷ್‌ರವರು ಮಾತನಾಡಿ, ರಾಷ್ಟ್ರಕವಿ ಶ್ರೀ ಜಿ.ಎಸ್. ಶಿವರುದ್ರಪ್ಪ ವಿರಚಿತ ಅನೇಕ ಕವನಗಳ ಆಧಾರದ ಮೇಲೆ ಈ ನಾಟಕವನ್ನು ರಚಿಸಿದ್ದು ಇದಕ್ಕೆ "ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?" ಎಂಬ ಶೀರ್ಷಿಕೆ ನೀಡಲಾಗಿದೆ. ನಮ್ಮ ಸಂಸ್ಥೆಯು ಕಳೆದ 30 ವರ್ಷಗಳಿಂದ ಈ ತರಹದ ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದು, ರಾಷ್ಟ್ರಕವಿ ಶ್ರೀ ಜಿ.ಎಸ್. ಶಿವರುದ್ರಪ್ಪನವರ ಕಾವ್ಯ ಕವನಗಳಲ್ಲಿ ಸುಮಾರು 22 ಅಂಶಗಳನ್ನು ಹೆಕ್ಕಿಕೊಂಡು ಈ ನಾಟಕರಚನೆಯಾಗಿದೆ. ಫೆಬ್ರವರಿ 7 ಅವರ ಹುಟ್ಟು ಹಬ್ಬದ ನಿಮಿತ್ತ ಇದರ ಅರ್ಪಣೆಯಾಗಿದೆ. ಈಗ ನೆಡೆಯುತ್ತಿರುವುದು ನಮ್ಮದು 8 ನೇ ಪ್ರದರ್ಶನವಾಗಿದೆ. ನಾಟಕದಲ್ಲಿ ಬರುವ ಎಲ್ಲಾ ಮಾತುಗಳು ಕವಿ ಶ್ರೀ ಶಿವರುದ್ರಪ್ಪನವರದು ಯಾವುದನ್ನು ಸೇರಿಸಿಲ್ಲ. ಕೇವಲ ದೊಡ್ಡಪ್ಪನಿಗೆ ಜಯವಾಗಲಿ ಎಂಬ ವಾಕ್ಯ ಮಾತ್ರ ಸೇರ್ಪಡೆಗೊಂಡಿದೆ. ಓದುವ ಪದ್ಯಗಳನ್ನು ಮತ್ತು ಮಾತನಾಡುವ ಪಠ್ಯಗಳನ್ನು ಇದರಲ್ಲಿ ಸೇರಿಸಲಾಗಿದೆ. 'ಕಾಣದ ಕಡಲಿಗೆ ಹಂಬಲಿಸಿದೆ ಮನ' ಎಂಬ ಇವರ ಕವನ ಪ್ರಸಿದ್ಧವಾದುದು. ಕವಿಯಾದವನು ಸಮಾಜದ ಅಂಕುಡೊಂಕುಗಳನ್ನು ತಿದ್ದಬೇಕು. ಕೋಮು ಭಾವನೆಗಳಿಗೆ ಧಕ್ಕೆ ಬಂದಾಗ ಅದರ ನಿವಾರಣೆಗೆ ಶ್ರಮಿಸಬೇಕು. ಶಿವರುದ್ರಪ್ಪನವರು ಮಹಿಳಾ ಸ್ವಾತಂತ್ರದ ಬಗ್ಗೆಯೂ ಅದ್ಭುತವಾಗಿ ಬರೆದಿದ್ದಾರೆ. ಅವರ ಕಾವ್ಯಗಳನ್ನು ರಂಗದ ಮೇಲೆ ತರಲು ವಿಭಿನ್ನವಾದ ಪ್ರಯತ್ನ ಮಾಡುತ್ತಿದ್ದೇವೆ ಎಂದರು.

## ಈ ವಾರದ ಸಭೆ

**ದಿನಾಂಕ: 01–04–2026, ಬುಧವಾರ ಸಂಜೆ 6:45 ರಿಂದ**

*Guest :*

***Advocate Sadhvi C. Kanth***

*Intellectual Property Rights (IPR)*
*Consultant and Legal Educator*

*Subject:*

***Legal Awarness on Emerging Laws In India***

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

**ಸ್ಥಳ: ರೋಟರಿ ಯುವ ಕೇಂದ್ರ, ಸವಳಂಗ ರಸ್ತೆ, ಶಿವಮೊಗ್ಗ**
































ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ




ನಂತರ ನಾಟಕ ಪ್ರಾರಂಭ. ಅದರಲ್ಲಿ 'ಪ್ರಕೃತಿಯಂತೆ ಕವಿಯ ಮನಸು' ಕವನ. ಮಾನವೀಯತೆ. ಪ್ರೀತಿ, ಜಾತ್ಯಾತೀತ ನೀತಿ, ಸಾಮಾಜಿಕ ಅನುಭವದ ಮಾತುಗಳು, ಸ್ವಪ್ನದ ಬಗ್ಗೆ, ಚೈತನ್ಯ, ವಾತ್ಸಲ್ಯ, ಪ್ರೀತಿ ಎಂದರೇನು, 'ನ ಸ್ತ್ರೀ ಸ್ವಾತಂತ್ರಮರ್ಹಸಿ' – ಹೀಗೆ ಹಲವಾರು ಮಾತುಗಳು 8 ಜನರ ನಾಟಕ ತಂಡದಿಂದ ವೇದಿಕೆಯಲ್ಲಿ ಪ್ರಸ್ತುತ ಪಡಿಸಲ್ಪಟ್ಟು ಯಶಸ್ವಿಯಾಯಿತು.

**ನಿರ್ದೇಶನ ಮತ್ತು ವಿನ್ಯಾಸ :**

ಡಾ. ಶ್ರೀಪಾದ ಭಟ್, ಡಾ. ಸಾಸ್ವೆಹಳ್ಳಿ ಸತೀಶ್.

**ವೇದಿಕೆಯಲ್ಲಿ ಪ್ರಸ್ತುತಿ :**

ಶ್ರೀ ಹರೀಶ್, ಶ್ರೀಮತಿ ಶುಭ, ಶ್ರೀಮತಿ ಮಾನಸ, ಶ್ರೀವರುಣ, ಕು. ಶೃತಿ, ಶ್ರೀ ಗಣೇಶ್ ಸಹ್ಯಾದ್ರಿ, ಕು.ಸನ್ನಿಧಿ, ದಯಾನಂದ ಸಾಗರ್ ಮುಂತಾದವರು ಭಾಗವಹಿಸಿದ್ದರು.

**ಹುಟ್ಟುಹಬ್ಬದ ಶುಭಾಶಯಗಳು:** ಕ್ಲಬ್‌ನ ಸಹಕಾರ್ಯದರ್ಶಿ ರೊ. ಶ್ರೀಕಾಂತ ನಾಡಿಗ್‌ರವರನ್ನು ವೇದಿಕೆಗೆ ಆಹ್ವಾನಿಸಿ ಹುಟ್ಟು ಹಬ್ಬದ ಶುಭಕೋರಿ ನೆನಪಿನ ಕಾಣಿಕೆ ನೀಡಲಾಯಿತು.

**ವಿವಾಹ ವಾರ್ಷಿಕೋತ್ಸವ :** ಈ ಕೆಳಕಂಡಂತೆ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ನಮ್ಮರೋಟರಿ ಸದಸ್ಯರುಗಳನ್ನು ವೇದಿಕೆಗೆ ಆಹ್ವಾನಿಸಿ ಶುಭಕೋರಿ ನೆನಪಿನ ಕಾಣಿಕೆ ನೀಡಲಾಯಿತು. ರೊ. ವೈ.ಗೋಪಾಲಕೃಷ್ಣ ಗುಪ್ತ ಮತ್ತು ರೊ.ಶ್ರೀಮತಿ ಶಾರದಾ ಗೋಪಾಲ್, ರೊ.ಡಿ.ಎಲ್. ಮಂಜುನಾಥ್, ರೊ.ಕಲಾವೃತ, ರೊ.ಡಿ.ವಿ.ಸದಾನಂದ ಮತ್ತು ಶ್ರೀಮತಿ ಸೀಮಾ ಸದಾನಂದ್, ರೊ. ಎನ್. ಗೋಪಿನಾಥ್, ರೊ. ಡಾ.ಆರ್.ಡಿ.ಪ್ರಭು ಮತ್ತು ರೊ.ಡಾ. ಉಷಾ ಪ್ರಭು, ರೊ.ಎಂ.ಎನ್.ಎಸ್. ಮಣಿ ಮತ್ತು ಶ್ರೀಮತಿ ಜಯಶ್ರೀ.

ಇತ್ತೀಚೆಗೆ ನಡೆದ ಸೀನಿಯರ್ ಚೇಂಬರ್ ರಾಷ್ಟ್ರಮಟ್ಟದ ಸಮ್ಮೇಳನದಲ್ಲಿ ನಮ್ಮ ಕ್ಲಬ್‌ನ ಮಾಜಿ ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು – ಭಾವನಾ ಸೀನಿಯರ್ ಚೇಂಬರ್ ಅಧ್ಯಕ್ಷರಾಗಿ ಮಾಡಿದ ಸಾಧನೆಗಳಿಗೆ ಹಲವಾರು ಅವಾರ್ಡ್‌ಗಳನ್ನು ಪಡೆದಿದ್ದು ಅವರನ್ನು ಮತ್ತು ರೊ.ಪಿಡಿಜಿ. ಡಾ.ಪಿ.ನಾರಾಯಣರವರು ಇತ್ತೀಚೆಗೆ ಅಂತರರಾಷ್ಟ್ರೀಯ ರೋಟರಿಯಿಂದ ಪಡೆದ ಜೀವಮಾನದ ಪ್ರಶಸ್ತಿ ಪಡೆದದ್ದನ್ನು ತಿಳಿಸಿ ಅವರುಗಳನ್ನು ವೇದಿಕೆಗೆ ಆಹ್ವಾನಿಸಿ ಪುಷ್ಪಗುಚ್ಛ ನೀಡಿ ಅಭಿನಂದಿಸಲಾಯಿತು.

ಈ ನಾಟಕ ಪ್ರದರ್ಶಿಸಲು ಸಹಕರಿಸಿದ ನಮ್ಮ ಈ ಕೆಳಕಂಡ ಸದಸ್ಯರುಗಳಿಗೆ ಕೃತಜ್ಞತೆಗಳನ್ನು ತಿಳಿಸಲಾಯಿತು. ರೊ.ವಿಶ್ವಾಸ್ ಎಲಬುರ್ಗಿ, ರೊ.ಸೆಂಥಿಲ್ ವೇಲನ್, ರೊ. ವೀರಣ್ಣ ಎ. ಹುಗ್ಗಿ, ರೊ.ಮಂಜುನಾಥ್ ಎಸ್, ರೊ.ಸಿ.ವಿಜಯಕುಮಾರ್. ರೊ.ಶೈಲಿನ್, ರೊ.ಪ್ರಭಾಕರ್, ರೊ.ಎನ್.ವಿ.ಭಟ್, ರೊ.ಶ್ರೀಕಾಂತ್ ನಾಡಿಗ್, ರೊ.ಪೇಟೆ ಅಜಯಕುಮಾರ್, ರೊ.ಹೆಚ್.ಎಸ್. ಮೋಹನ್, ರೊ.ಡಿ.ವಿ.ಸದಾನಂದ ಮುಂತಾದವರು ಸಹಕರಿಸಿದ್ದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದ ನಂತರ ಭೋಜನದ ವ್ಯವಸ್ಥೆಯಾಗಿತ್ತು.



## *Citation read by PDG Manjoo Phadke while presenting LIFETIME ACHIEVMENT AWARD toDr.P.Narayana at Rotary TEJUS Rotary Zone Institute 2025 Delhi*

Dr. Narayana P. has been one of the most committed champions of Rotary's Polio Eradication Mission, combining medical expertise with a deep humanitarian spirit. His leadership has strengthened Rotary's work across communities, ensuring that vulnerable children receive timely and essential protection against polio. With his strong technical understanding and practical field experience, Dr. Narayana has guided countless immunization activities, trained volunteers, and supported districts in planning and executive high impact outreach programs. His calm, steady presence and hands-on involvement have often been the driving force behind successful polio rounds in challenging areas. What makes his contribution truly remarkable is his willingness to go beyond the call of duty, whether it is engaging with health officials, counselling hesitant families, or standing with Rotary teams in remote locations where immunization is needed the most. His passion for service has earned the trust of communities and the admiration of Rotarians across the region. Through dedication, expertise, and unwavering commitment, Dr. Narayana P. has played a vital role in advancing Rotary's fight against polio. His work continues to inspire us and remind us that determined, compassionate leadership at the grassroots is what ultimately sustains the vision of polio-free world. We acknowledge your efforts, Dr. Narayana P.

## ◆ ಅಭಿನಂದನೆಗಳು ◆

- ರೊ. ಪಿಡಿಜಿ. ಡಾ.ಪಿ. ನಾರಾಯಣರವರಿಗೆ ಪೋಲಿಯೋ ಅಭಿಯಾನದಲ್ಲಿ 'ಜೀವಮಾನದ ಸಾಧನಾ' ಪ್ರಶಸ್ತಿ ದೊರೆತ ಹಿನ್ನೆಲೆಯಲ್ಲಿ ಅಭಿನಂದನೆಗಳು.
- ನಮ್ಮ ಕ್ಲಬ್‌ನ ಮಾಜಿ ಕಾರ್ಯದರ್ಶಿ ರೊ.ಎನ್.ಜಿ.ಉಷಾರವರು ಭಾವನ ಸೀನಿಯರ್ ಚೇಂಬರ್ ಅಧ್ಯಕ್ಷರಾಗಿ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದು ಅವರಿಗೆ ಇತ್ತೀಚೆಗೆ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ಹಲವಾರು ಪ್ರಶಸ್ತಿಗಳನ್ನು ನೀಡಿ ಪುರಸ್ಕರಿಸಲಾಗಿದೆ ಅವರಿಗೆ ಅಭಿನಂದನೆಗಳು
- ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ವೈ.ಗೋಪಾಲಕೃಷ್ಣ ಗುಪ್ತ ಮತ್ತು ರೊ.ಶಾರದಾ ಗೋಪಾಲ್ ದಂಪತಿಗಳಿಗೆ ಅವರ 50 ವರ್ಷದ ಸುವರ್ಣ ಮಹೋತ್ಸವದ ದಾಂಪತ್ಯ ಜೀವನಕ್ಕೆ ಅಭಿನಂದನೆಗಳು ಮತ್ತು ಶುಭ ಹಾರೈಕೆಗಳು.
- ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಟಿ.ಆರ್. ಅಶ್ವಥನಾರಾಯಣ ಮತ್ತು ಕುಟುಂಬವರ್ಗದವರಿಗೆ ಅವರ ಶ್ರೀನಿಧಿ ಸಿಲ್ಕ್ಸ್ ಸಂಸ್ಥೆ 42 ವರ್ಷಗಳನ್ನು ಪೂರೈಸಿ ಯಶಸ್ವಿಯಾಗಿ ಮುಂದುವರೆದಿದೆ. ಅವರ ಎಲ್ಲಾ ಕುಟುಂಬವರ್ಗದವರಿಗೆ ರೋಟರಿಯ ಎಲ್ಲಾ ಸದಸ್ಯರ ಪರವಾಗಿ ಅಭಿನಂದನೆಗಳು ಹಾಗೂ ಈ ಸಂಸ್ಥೆ ಇನ್ನೂ ಅಭಿವೃದ್ಧಿಯಾಗಿ ಶಿವಮೊಗ್ಗೆ ಹಾಗೂ ಸುತ್ತಮುತ್ತಲಿನ ಜನತೆಗೆ ಹಾಗೂ ಸರ್ವರಿಗೂ ಅನುಕೂಲವಾಗಲಿ ಎಂಬ ಶುಭ ಹಾರೈಕೆಗಳು.



## ಸಂಪಾದಕೀಯ

### ಬಾಳು ಎಂಬುದು ಋಣದ ರತ್ನದ ಗಣಿ

ದೀರ್ಘವಾದ ರೈಲು ಯಾತ್ರೆಯಲ್ಲಿ ಸಿಗುವ ಅನೇಕ ನಿಲ್ದಾಣಗಳಲ್ಲಿ ಜನ ಹತ್ತುವುದು, ಇಳಿಯುವುದು ಇದ್ದೇ ಇರುತ್ತದೆ. ಇತ್ತೀಚೆಗೆ ಶಿವಮೊಗ್ಗದಿಂಧ ಬೆಳಗಿನ 5.15 ಗಂಟೆಗೆ ಹೊರಡುವ ಜನಶತಾಬ್ಧಿ ರೈಲಿನಲ್ಲಿ ನಾವು ದಂಪತಿಗಳು ಬೆಂಗಳೂರಿಗೆ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಹೋಗುತ್ತಿದ್ದೆವು. ರೈಲಿನಲ್ಲಿ ಮಾರುವ ತಿಂಡಿ-ತಿನಿಸು ತಿನ್ನುವ ಅಭ್ಯಾಸವಿಲ್ಲದ ನಾವು ಮನೆಯಿಂದ ಕಾಫಿ-ಬಿಸ್ಕತ್ತುಗಳನ್ನಷ್ಟೇ ಜೊತೆಯಲ್ಲಿಟ್ಟುಕೊಂಡು ಪ್ರಯಾಣಿಸುತ್ತಿದ್ದೆವು. ಮಾರ್ಗಮಧ್ಯೆ ಪಕ್ಕದಲ್ಲಿದ್ದ ಇಂಜಿನಿಯರ್ ಒಬ್ಬರು ಆಗತಾನೇ ಪರಿಚಯ ಮಾಡಿಕೊಂಡು ಆತ್ಮೀಯರಾದರು. ನಮ್ಮ ಬಳಿಯಿದ್ದ ಕಾಫಿ-ಬಿಸ್ಕತ್ತು ಜೊತೆಗೆ ಹಂಚಿಕೊಂಡೆವು. ನಂತರ ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ಇಳಿದಿದ್ದೇ ತಡ ಎಷ್ಟೇ ಬೇಡವೆಂದರೂ ಕೇಳದೆ ಹತ್ತಿರದ ಒಳ್ಳೆಯ ಹೋಟೆಲ್‌ಗೆ ನಮ್ಮನ್ನು ಕರೆದುಕೊಂಡು ಹೋಗಿ ಬಿಸಿಬಿಸಿ ಮಸಾಲೆ ದೋಸೆ ತರಿಸಿ, ಕಾಫಿ ಕುಡಿಸಿ ಕಳಿಸಿದರು. ಅವರಾರೋ ಸಹ ಪ್ರಯಾಣಿಕ ಮಿತ್ರರು. ಆದರೆ ಅವರ ಪ್ರೀತಿ, ವಿಶ್ವಾಸ ಮರೆಯಲಾಗದು.

'ಎನಿತು ಜನ್ಮದಲಿ, ಎನಿತು ಜೀವರಿಗೆ ಎನಿತು ನಾವು ಋಣಿಯೋ?' – ಡಾ. ಜಿ. ಎಸ್. ಶಿವರುದ್ರಪ್ಪ.

ಇದ್ಯಾವ ಜನ್ಮದ ಋಣ? ಕೆಲಕ್ಷಣಗಳ ಹಿಂದಷ್ಟೇ ಮಾತಾಡಿದ ವ್ಯಕ್ತಿ ನಮಗೆ ರುಚಿಯಾದ ತಿಂಡಿ ತರಿಸಿಕೊಟ್ಟಿದ್ದಾನೆ. ಇವರ ಈ ಋಣವನ್ನು ಹೇಗೆ ತೀರಿಸುವುದು? ಇಂಥವೇ ವಿಚಾರಗಳು ಮನಸ್ಸಿನಲ್ಲಿ ಮಥಿಸುತ್ತಿದ್ದವು. ನಮ್ಮ ಹುಟ್ಟಿನಿಂದ ಸಾಯುವವರೆಗೂ ಈ ರೈಲು ಬೋಗಿಯಂತೆ ಎಷ್ಟೋ ಜನರು ನಮ್ಮ ಬದುಕಿನಲ್ಲಿ ಬರುತ್ತಾರೆ, ಹೋಗುತ್ತಾರೆ. ಒಂದಿಲ್ಲಾ ಒಂದು ಋಣವನ್ನು ತೀರಿಸಿ ಅಥವಾ ಹೊರಿಸಿ ಹೋಗಿರುತ್ತಾರೆ. ಹಾಗೆಯೇ ಆ ಋಣವನ್ನು ಇನ್ಯಾವುದೋ ರೂಪದಲ್ಲಿ ತೀರಿಸುತ್ತೇವೆ. ಸಂಘ ಜೀವಿಯಾದ ಮನುಷ್ಯನ ಬದುಕು ಒಂದಿಲ್ಲಾ ಒಂದು ಋಣಭಾರದ ಚಕ್ರದಲ್ಲಿ ತಿರುಗುತ್ತಿರುತ್ತದೆ. ತಂದೆ, ತಾಯಿ, ಗುರು ಹಿರಿಯರು, ನೆರೆ ಹೊರೆಯವರು, ಸ್ನೇಹಿತರು, ಎಲ್ಲೋ ಒಮ್ಮೆ ಭೇಟಿಯಾದವರು, ಅಪರಿಚಿತರು, ಸುತ್ತಲಿನ ಗಾಳಿ ಬೆಳಕು, ಅನ್ನ ಬೆಳೆಯುವ ರೈತ, ಭೂಮಿ ತಾಯಿ ಹೀಗೆ ಎಲ್ಲರ, ಎಲ್ಲದರ ಋಣಬಾರದೊಂದಿಗೆ ಮನುಷ್ಯ ಜೀವಿ ಬಾಳುತ್ತಾನೆ. ಬದುಕು ಕಟ್ಟಿಕೊಳ್ಳುತ್ತಾನೆ.

ಹೊತ್ತು ಹೆತ್ತು ಬೆಳೆಸಿದ ತಂದೆ ತಾಯಿಗಳನ್ನು ವೃದ್ಧಾಪ್ಯದಲ್ಲಿ ಚೆನ್ನಾಗಿ ನೋಡಿಕೊಳ್ಳುವುದು, ಅವರ ಆಸೆಗಳನ್ನು ಈಡೇರಿಸುವುದು, ಅವರಿಗೆ ಸಮಯ ಕೊಡುವುದು ನಮ್ಮ ಕರ್ತವ್ಯವಾಗಿದೆ. ನನ್ನಮ್ಮ ತೀರಿಕೊಂಡಾಗ ತಲೆದಿಂಬಿನಡಿ ಕರವಸ್ತ್ರದಲ್ಲಿ ಕಟ್ಟಿಟ್ಟಿದ್ದ ಇಪ್ಪತ್ತು ಸಾವಿರ ರೂಪಾಯಿ ಸಿಕ್ಕಿತು. ಮರಣದಲ್ಲೂ ಯಾರಿಗೂ ತೊಂದರೆ ಯಾಗಬಾರದು, ಭಾರವಾಗಬಾರದು ಎಂಬ ಕಾಳಜಿ!

ಒಂದು ಕ್ಷಣ ಹಿಂತಿರುಗಿ ನೋಡಿದರೆ ನಮ್ಮ ಬದುಕಿಗೆ ನೆರಳಿನಂತೆ ಕಾಪಾಡಿದವರೆಷ್ಟೋ ಜನ ನೆನಪಾಗಬಹುದು. ಕೇಡು ಮಾಡಿದವರಿಗಿಂತ ಒಳಿತು ಮಾಡಿದವರನ್ನು ನೆನೆಯಬೇಕು' 'ಕೆರೆಯ ನೀರನು ಕೆರೆಗೆ ಚೆಲ್ಲುವಂತೆ' ಈ ಲೋಕದಿಂದ ಗಳಿಸಿದ್ದನ್ನು ಲೋಕಕ್ಕೆ ಸಂದಾಯ ಮಾಡಬೇಕು. ಪರಿಸರವನ್ನು ಸಂರಕ್ಷಿಸಿ ಪರಿಸರದ ಋಣವನ್ನು ತೀರಿಸಬೇಕು. ಜೊತೆಗೆ ಅತ್ಯಮೂಲ್ಯವಾದ ಈ ಬದುಕನ್ನು ನೀಡಿದ ಆ ದೇವರೆಂಬ ತತ್ವಕ್ಕೂ ಋಣಿಯಾಗಿರಬೇಕು.

• ರೊ. ಎಂ. ಮಾಧವಾಚಾರ್



**ಮುದ್ದುರಾಮನ ಚೌಪದಿ...**

ಪೂಜಿಸುವ ನೆಲೆಯಲ್ಲಿ ಕುಲವನರಸುವುದೇಕೋ
ಸಂತಸಂಗದಲಿ ಮದಿಸಿ ಮೆರೆಯುವುದೇಕೋ
ಆಚಾರವಿದ್ದಲ್ಲಿ ಭೇದಭಾವಗಳೇಕೋ
ಬೇಡ ದಿಟಕಲಬೆರಕೆ- ಮುದ್ದುರಾಮ






ದಿನಾಂಕ: 24-03-2026 ರಂದು ಮಹಿಳಾ ದಿನಾಚರಣೆಯ ಪ್ರಯುಕ್ತ ಕಮಲಾ ನೆಹರು ಮೆಮೋರಿಯಲ್ ನ್ಯಾಷನಲ್ ಕಾಲೇಜ್ ಆಫ್ ವುಮೆನ್ ಮತ್ತು ರೋಟರಿ ಕ್ಲಬ್ ಶಿವಮೊಗ್ಗ ವತಿಯಿಂದ **'Rights, Justice, Action for all Women & Girls'** ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಜಸ್ಟೀಸ್ ಸಂತೋಷ್ ಎಂ.ಎಸ್., ಸೀನಿಯರ್ ಸಿವಿಲ್ ಜಡ್ಜ್ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಶ್ರೀಮತಿ ಮಮತ ಪಿ.ಆರ್. ಪ್ರಾಂಶುಪಾಲರು ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಶ್ರೀಮತಿ ಸಾಧ್ವಿ ಸಿ. ಕಾಮತ್, ಅಡ್ವೋಕೇಟ್ ಮತ್ತು ಶ್ರೀಮತಿ ಆಶಾಲತಾ ಎಂ., ಐಕ್ಯೂಎಸಿ ಕೋ ಆರ್ಡಿನೇಟರ್, ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ. ಆರ್. ಆನಂದ್, ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿ, ರೊ. ಕಾಂಚನ್ ಕುಲಕರ್ಣಿ ಮುಂತಾದವರು ಭಾಗವಹಿಸಿದ್ದರು.

### ಬೇಸಿಗೆಯಲ್ಲಿ ಚರ್ಮದ ಅಲರ್ಜಿಗೆ ಮನೆಮದ್ದುಗಳು

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

- **ತಣ್ಣೀರು ಕಾಂಪ್ರೆಸ್** : ತಣ್ಣೀರು ಬಟ್ಟೆ ಚರ್ಮದ ಮೇಲೆ 10 ನಿಮಿಷ ಇಡಿ. ಕೆರವು, ಕೆಂಪು ಕಡಿಮೆಯಾಗುತ್ತದೆ.
- **ಅಲೋವೆರಾ:** ಜೆಲ್ ಹಚ್ಚಿ. ತಂಪು ಮತ್ತು ಉರಿ ಕಡಿಮೆ ಮಾಡುತ್ತದೆ.
- **ಚಂದನ** : ಪೇಸ್ಟ್ ಹಚ್ಚಿ. ಚರ್ಮ ತಂಪಾಗಿ ಅಲರ್ಜಿ ಕಡಿಮೆಯಾಗುತ್ತದೆ.
- **ಸೌತೆಕಾಯಿ** : ರಸ/ತುಂಡುಗಳನ್ನು ಹಚ್ಚಿ. ಚರ್ಮ ಹೈಡ್ರೇಟ್ ಆಗುತ್ತದೆ.
- **ಓಟ್ಸ್ ಸ್ನಾನ** : ಸ್ನಾನ ಮಾಡುವ ನೀರಿಗೆ ಓಟ್ಸ್ ಪುಡಿ ಹಾಕಿ ಚರ್ಮದ ಕೆರವು ಕಡಿಮೆಯಾಗುತ್ತದೆ.
- **ತೆಂಗಿನ ಎಣ್ಣೆ ಹಚ್ಚಿ:** ಸ್ವಲ್ಪ ತೆಂಗಿನ ಎಣ್ಣೆ ಹಚ್ಚಿ. ಚರ್ಮ ಮೃದುವಾಗುತ್ತದೆ ಮತ್ತು ರಕ್ಷಣೆ ಕೊಡುತ್ತದೆ.
- **ನಿಂಬೆ ಮತ್ತು ಜೇನುತುಪ್ಪ** : ಸ್ವಲ್ಪ ನಿಂಬೆರಸ ಮತ್ತು ಜೇನುತುಪ್ಪ ಮಿಶ್ರಣಮಾಡಿ ಹಚ್ಚಬಹುದು. (ಸೆನ್ಸಿಟಿವ್ ಸ್ಕಿನ್ ಇದ್ದರೆ ಬೇಡ.)
- **ತಂಪಾದ ಆಹಾರಗಳು** : ಮಜ್ಜಿಗೆ, ತೆಂಗಿನ ನೀರು, ಹಣ್ಣುಗಳಾದ ಕಲ್ಲಂಗಡಿ, ಸೌತೆಕಾಯಿ ಸೇವಿಸಿ. ಹೆಚ್ಚು ನೀರು ಕುಡಿಯಿರಿ.
- **ತಪ್ಪಿಸಬೇಕಾದವುಗಳು** : ಬಿಸಿಲಿನಲ್ಲಿ ಹೆಚ್ಚು ಸಮಯ ಇರಬಾರದು. ಕಠಿಣ ಸಾಬೂನು, ಕೆಮಿಕಲ್ ಕ್ರೀಮ್, ಸ್ಕ್ರಾಚ್ ಮಾಡುವುದು.

**ಹೆಚ್ಚು ಊತ ಅಥವಾ ಪಸ್ ಬಂದರೆ, ಅಲರ್ಜಿ ಹರಡುತ್ತಿದ್ದರೆ, 2-3 ದಿನದಲ್ಲಿ ಕಡಿಮೆಯಾಗದಿದ್ದರೆ ವೈದ್ಯರನ್ನು ಸಂಪರ್ಕಿಸಿ.**



*Happy Birthday Wishes*



*V. Sreenivasa*
*30th March*





*Anuradha Sheernaly*
*1st April*

To,

*Book Post*